# BMS

## INSTITUTE OF TECHNOLOGY AND MANAGEMENT

Avalahalli, Doddaballapur Main Road, Bengaluru – 560064

## Student Article – Vijaya Karnataka



ಸೋಶಿಯಲ್ ಮೀಡಿಯಾದಲ್ಲಿ ಚಾಲೆಂಜ್‌ಗಳ ಟ್ರೆಂಡ್ ಹೆಚ್ಚಾಗುತ್ತಿದೆ. ಮೊನ್ನೆಯಷ್ಟೇ ಕವನ ಓದುವ ಚಾಲೆಂಜ್ ವೈರಲ್ ಆಗಿತ್ತು. ಅದೇ ರೀತಿ ಬೆಂಗಳೂರಿನ ಕಾಲೇಜುಗಳಲ್ಲಿ ಯಾವ್ಯಾವ ವಿಷಯಗಳಿಗೆ ಸೋಶಿಯಲ್ ಮೀಡಿಯಾ ಚಾಲೆಂಜ್ ಇದೆ ಎಂಬುದನ್ನು ವಿದ್ಯಾರ್ಥಿ ವರದಿಗಾರರು ತಿಳಿಸಿದ್ದಾರೆ.

# ಕ್ಯಾಂಪಸ್‌ನಲ್ಲಿ ಸೋಶಿಯಲ್ ಮೀಡಿಯಾ ಚಾಲೆಂಜ್ ಟ್ರೆಂಡ್

### ನಿಗದಿತ ಸಮಯದಲ್ಲಿ ಅಸೈನ್‌ಮೆಂಟ್

Shivashankara S/ Acharya College

ನಮ್ಮ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಮಹಾ ಚಾಲೆಂಜ್ ಎಂದರೆ ಅಸೈನ್ಮೆಂಟ್ ಮತ್ತು ರೆಕಾರ್ಡ್ ಬುಕ್ ಬರೆದು ಕೊಡುವುದು. ಪರೀಕ್ಷೆ ಹತ್ತಿರ ಬರುತ್ತಿದ್ದಂತೆ ಅಸೈನ್ಮೆಂಟ್ ಬರೆಯುವುದಾ, ಇಲ್ಲ, ಪರೀಕ್ಷೆಗೆ ಸಿದ್ಧತೆ ನಡೆಸುವುದಾ ಎನ್ನುವ ಗೊಂದಲದಲ್ಲಿ ಸಿಲುಕಿಕೊಂಡಿರುತ್ತೇವೆ. ಯಾಕೆಂದರೆ ಅಸೈನ್ಮೆಂಟ್ ಕೊಟ್ಟಿಲ್ಲ ಎಂದರೆ ಪ್ರಾಧ್ಯಾಪಕರು ಇಂಟರ್‌ನಲ್ ಮಾರ್ಕ್ಸ್ ಕೊಡಲ್ಲ, ಪರೀಕ್ಷೆಗೆ ಸಿದ್ಧತೆ ನಡೆಸಿಲ್ಲ ಎಂದರೆ ಫೇಲ್ ಆಗುತ್ತೇವೆ ಎನ್ನುವ ಭಯ. ಅಸೈನ್ಮೆಂಟ್ ಮತ್ತು ರೆಕಾರ್ಡ್ ಬುಕ್ ಸಲ್ಲಿಸುವ ದಿನ ಹತ್ತಿರವಾಗುತ್ತಿದ್ದಂತೆ ಎಲ್ಲ ವಿದ್ಯಾರ್ಥಿಗಳು ಕ್ಲಾಸ್‌ಗೆ ಬಂಕ್ ಮಾಡಿ, ಲೈಬ್ರೆರಿಯಲ್ಲಿ ಹಾಜರಿರುತ್ತಾರೆ. ಎಲ್ಲ ವಿದ್ಯಾರ್ಥಿಗಳು ಬರೆಯುವುದರಲ್ಲಿ ಮಗ್ನರಾಗಿರುತ್ತಾರೆ. ಅಸೈನ್ಮೆಂಟ್ ಬರೆದು ಕೊಡುವುದು ಒಂದು ದಿನ ತಡ ಆದರೂ, ಸ್ವೀಕರಿಸಲು ಪ್ರಾಧ್ಯಾಪಕರು ನಿರಾಕರಿಸುತ್ತಾರೆ. ಅವರನ್ನ ಒಪ್ಪಿಸುವುದು ಇನ್ನೂ ದೊಡ್ಡ ತಲೆ ಬಿಸಿಯ ಕೆಲಸ. ಇದೇ ನಮಗೆ ಚಾಲೆಂಜ್ ಆಗಿರುತ್ತದೆ.

### ಮದುವೆ ಹೆಣ್ಣು ಮತ್ತು ಗಂಡಿನ ವೇಷ

Tanuj Shasrti/ Vijayanaga College

ಸಾಂಸ್ಕೃತಿಕ ಉಡುಗೆ ತೊಟ್ಟು ಕಾಲೇಜಿಗೆ ಬರುವ ಚಾಲೆಂಜ್ ಅನ್ನು ನಮ್ಮ ಕಾಲೇಜಿನಲ್ಲಿ ಕೆಲವರು ಹಾಕಿದ್ದರು. ಅದನ್ನು ತೊಟ್ಟು ಸಾಕಷ್ಟು ಜನ ಬಂದಿದ್ದರು. ಇದನ್ನು ಕೆಲವರು ನಾನು ಮದುವೆ ಗಂಡಿನ ಥರ ಡ್ರೆಸ್ ಹಾಕಿದ್ದೇನೆ, ನೀನು ಮದುಮಗಳ ಥರ ಕಾಣ್ತಾ ಇದ್ದೀಯ ಎಂದು ಹೇಳಿ ತಮ್ಮ ಲವ್ ಪ್ರಪೋಸ್ ಮಾಡಿದ್ದರು. ಇದು ಹಾಸ್ಯಾಸ್ಪದವಾದರೂ ಕೆಲ ಹುಡುಗರು ಇದನ್ನು ಸಕ್ಸಸ್ ಮಾಡಿಕೊಂಡರು.

### ಬೈಕ್‌ಗೆ ಡಿಫ್ರೆಂಟ್ ಕಲರ್ ಚಾಲೆಂಜ್

Pramod Gowda/ BMSIT College

ನಮ್ಮ ಕಾಲೇಜಿನಲ್ಲಿ ಬೈಕ್‌ಗಳಿಗೆ ವಿಭಿನ್ನ ಪೇಂಟಿಂಗ್ ಮಾಡಿ ಓಡಿಸುವುದು ಇತ್ತೀಚೆಗೆ ಟ್ರೆಂಡ್ ಆಗಿದೆ. ಸೈಲೆನ್ಸರ್‌ಗಳನ್ನು ಆಲ್ಟ್ರೇಶನ್ ಮಾಡಿ ಬೈಕ್‌ಗಳನ್ನು ಓಡಿಸುವುದು ಸಹ ಒಂದು ಚಾಲೆಂಜ್ ಆಗಿದೆ. ಇದೆಲ್ಲದರ ಜತೆಯಲ್ಲಿ ದೇಶ ವಿದೇಶಿ ಬೈಕ್‌ಗಳನ್ನು ಕಾಲೇಜಿಗೆ ತಂದು ಅದರ ಮೇಲೆ ಕುಳಿತು ಫೋಟೊ ಕ್ಲಿಕ್ಕಿಸುವ ಚಾಲೆಂಜ್ ಕೂಡಾ ನಡೆಯುತ್ತಿದೆ.

### ಟೆನ್ ಯಿಯರ್ಸ್ ಚಾಲೆಂಜ್

Diganth/ KLE College

ಕಾಲೇಜು ಸ್ಟೂಡೆಂಟ್ಸ್‌ಗೆ ಸೋಶಿಯಲ್ ಮೀಡಿಯಾ ಫೇವರಿಟ್ ತಾಣವಾಗಿದೆ. ಅವರ ಬದುಕಿನಲ್ಲಿ ಏನೇ ಆದರೂ ಅದನ್ನು ಫೇಸ್‌ಬುಕ್, ಟ್ವಿಟ್ಟರ್, ಇನ್‌ಸ್ಟಾಗಳಲ್ಲಿ ಅಪ್‌ಲೋಡ್ ಮಾಡುತ್ತಾರೆ. ನಮ್ಮ ಕಾಲೇಜಿನಲ್ಲಿ ಇತ್ತೀಚೆಗೆ ಬಾರಿ ಸದ್ದು ಮಾಡಿದ ಮತ್ತು ಮಾಡುತ್ತಿರುವ ಚಾಲೆಂಜ್ ಅಂದ್ರೆ 10 ಯಿಯರ್ಸ್ ಚಾಲೆಂಜ್. ಮಕ್ಕಳ ದಿನಾಚರಣೆ ಪ್ರಯುಕ್ತ ಈ ಚಾಲೆಂಜ್ ಫೇಮಸ್ ಆಗಿದೆ. ತಮ್ಮ 10 ವರ್ಷದ ಹಿಂದಿನ ಫೋಟೋ ಮತ್ತು ಇಂದಿನ ಫೋಟೋ ಅಪ್‌ಲೋಡ್ ಮಾಡಿ ಬೇರೆಯವರಿಗೆ ಈ ಚಾಲೆಂಜ್ ಪಾಸ್ ಮಾಡುತ್ತಿದ್ದಾರೆ.